**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

ಪ್ರಾಸ – 2

**CC No**: 707/2022 ಚಾಸ– 11

| | |
|---|---|
| ಹೆಸರು | ಎಂ.ಎ. ದೇವರಾಜು |
| ಗಂಡನ ಹೆಸರು | ಅಣ್ಣಾಜಿಗೌಡ |
| ವಯಸ್ಸು | 49 ವರ್ಷ |
| ಉದ್ಯೋಗ | ಪೊಲೀಸ್ ಮುಖ್ಯ ಪೇದೆ, ಚನ್ನರಾಯಪಟ್ಟಣ ಗ್ರಾಮಾಂತರ ಠಾಣೆ. |
| ವಾಸಸ್ಥಳ | ಚನ್ನರಾಯಪಟ್ಟಣ. |

ದಿನಾಂಕಃ 20.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ–**

ನಾನು 2017 ರಿಂದ 2022 ನಾನು ಹಳ್ಳಿಮೈಸೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ : 08.06.2022 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 6 ಗಂಟೆ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂ. 96/2022 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕ : 09.06.2022 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ 8 ಮತ್ತು 9 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಜಾಗದಲ್ಲಿ ಸ್ಥಳ ಮಹಜರ್ ಜರುಗಿಸಿ ಆ ಸಮಯಕ್ಕೆ ಚಾಸಾ 1 ರವರು ಹಾಜರುಪಡಿಸಿದ ಕಲ್ಲು, ಸೀರೆ ಮತ್ತು ರವಿಕೆಯನ್ನು ಜಪ್ತಿ ಪಡಿಸಿಕೊಂಡು ಬೆಳಿಗ್ಗೆ 10.30 – 12.30 ರವರೆಗೆ ಸ್ಥಳ ಮಹಜರ್ ಬರೆದು ಪಂಚರಿಗೆ ಹಾಗೂ ಚಾಸಾ 1 ರವರಿಗೆ ಓದಿ ಹೇಳಿ

ಅವರ ಸಹಿಗಳನ್ನು ಪಡೆದಿರುತ್ತೇನೆ. ಪಂಚನಾಮೆಯ ಸಮಯಕ್ಕೆ ನಾನು ಪಂಚರಿಗೆ ನೋಟಿಸ್ ಜಾರಿ ಮಾಡಿರುತ್ತೇನೆ. ಪಂಚನಾಮೆಯ ಸಮಯಕ್ಕೆ ಫೋಟೋಗಳನ್ನು ತೆಗೆದಿರುತ್ತೇನೆ. ನಂತರ ಜಪ್ತಿ ಪಡಿಸಿಕೊಂಡ ವಸ್ತುಗಳಿಗೆ ಸಂಬಂಧಿಸಿದಂತೆ ಮಾಲುಪಟ್ಟಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕ : 14.06.2022 ರಂದು ಚಾಸಾ 5 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ : 21.06.2022 ರಂದು ಚಾಸಾ 6 ಮತ್ತು 9 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ : 21.06.2022 ರಂದು ಚಾಸಾ 1 ರವರ ಹೇಳಿಕೆಯನ್ನು ಸಿ.ಆರ್.ಪಿ.ಸಿ. ಕಾಯ್ದೆ ಕಲಂ : 164 ರಡಿಯಲ್ಲಿ ದಾಖಲಿಸಿಕೊಡುವಂತೆ ಮಪಿಸಿ ರೂಪ ರವರ ಜೊತೆ ಅರಕಲಗೂಡಿನ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ : 27.06.2022 ರಂದು ಚಾಸಾ 7, 9 ಮತ್ತು 2 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ : 17.06.2022 ರಂದು ಕೃತ್ಯ ನಡೆದ ಸ್ಥಳದ ಖಾತಾ ಎಕ್ಸ್‌ಟ್ರಾಕ್ಟ್ ಅನ್ನು ಪಡೆದಿರುತ್ತೇನೆ. ನಂತರ ದಿನಾಂಕ : 30.09.2022 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 1(ಬಿ) ಎಂದು, ಮಹಜರ್ ಅನ್ನು ಈಗಾಗಲೇ ನಿಪಿ 2 ಎಂದು ಗುರುತಿಸಿದ್ದು, ಸಹಿಯನ್ನು ನಿಪಿ 2(ಬಿ) ಎಂದು, ನೋಟಿಸ್ ಅನ್ನು ಈಗಾಗಲೇ ನಿಪಿ 3 ಎಂದು ಗುರುತಿಸಿದ್ದು, ಸಹಿಯನ್ನು ನಿಪಿ 3(ಬಿ) ಎಂದು, ಪ್ರ.ವ.ವರದಿಯನ್ನು ನಿಪಿ 5 ಎಂದು, ಸಾಕ್ಷಿ ಸಹಿಯನ್ನು ನಿಪಿ 5(ಎ) ಎಂದು, ಖಾತಾ ಎಕ್ಸ್‌ಟ್ರಾಕ್ಟ್ ಅನ್ನು ನಿಪಿ 6 ಎಂದು, ಸಾಕ್ಷಿ ಸಹಿಯನ್ನು ನಿಪಿ 6(ಎ) ಎಂದು, ಫೋಟೋಗಳನ್ನು ನಿಪಿ 7 ರಿಂದ 9, ಸಿ.ಡಿ.ಯನ್ನು ನಿಪಿ 10 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಸೀರೆ, ರವಿಕೆ ಮತ್ತು ಕಲ್ಲನ್ನು ನೋಡಿ ಗುರುತಿಸಿದ್ದರಿಂದ ಸೀರೆಯನ್ನು ಎಂ.ಓ. 1 ಎಂದು, ರವಿಕೆಯನ್ನು ಎಂ.ಓ. 2 ಎಂದು, ಕಲ್ಲನ್ನು ಎಂ.ಓ. 3 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು 1 ನೇ ಆರೋಪಿ ಪರ ಶ್ರೀ. ಹೆಚ್.ಎಸ್.ಎ. ವಕೀಲರಿಂದ :-</u>**

ದಿನಾಂಕ : 08.06.2022 ರಂದು ನನ್ನ ಕರ್ತವ್ಯದ ಅವಧಿ ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಇತ್ತು. ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದು ತೋರಿಸುವ ದಾಖಲೆಯನ್ನು ದೋಷಾರೋಪಣ ಪಟ್ಟಿಯಲ್ಲಿ ಹಾಜರುಪಡಿಸಿಲ್ಲ, ಯಾವುದೇ ತೊಂದರೆ ಇರಲಿಲ್ಲ. ದಿನಾಂಕ : 08.06.2022 ಸಂಜೆ 6 ಗಂಟೆಗೆ ಚಾಸಾ 1 ರವರು ಲಿಖಿತ ದೂರು ಸಲ್ಲಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ : 09.06.2022 ರಂದು ನಾನು ಠಾಣೆಯನ್ನು ಬೆಳಿಗ್ಗೆ 9 ಗಂಟೆಗೆ ಬಿಟ್ಟಿರುತ್ತೇನೆ. ಹಳ್ಳಿಮೈಸೂರಿನಿಂದ ಘಟನಾ ಸ್ಥಳಕ್ಕೆ ಹೋಗಲು 45 ನಿಮಿಷ ಬೇಕಾಗುತ್ತದೆ ಎಂದರೆ ಸಾಕ್ಷಿ ಅರ್ಧ ಗಂಟೆ ಸಾಕು ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕೆ ನಾನು ಒಬ್ಬನೇ ಹೋಗಿದ್ದೆ. ಘಟನಾ ಸ್ಥಳಕ್ಕೆ ನಾನು ನನ್ನ ಸ್ವಂತ ಬೈಕಿನಲ್ಲಿ ಹೋಗಿದ್ದೆ. ನಾನು ಘಟನಾ ಸ್ಥಳಕ್ಕೆ ಲ್ಯಾಪ್‌ಟಾಪ್, ಪೆನ್‌ಡ್ರೈವ್ ಅನ್ನು ತೆಗೆದುಕೊಂಡು ಹೋಗಿದ್ದೆ, ನನಗೆ ಟೈಪ್ ಮಾಡಲು ಬರುತ್ತದೆ. ಘಟನಾ ಸ್ಥಳ ಹಳ್ಳಿ ಎಂದರೆ ಸರಿ. ಘಟನಾ ಸ್ಥಳದ ಅಕ್ಕಪಕ್ಕ ಪ್ರಿಂಟ್ ತೆಗೆಯಲು ಬೇಕಾಗುವ ಪ್ರಿಂಟರ್ ಸೌಲಭ್ಯ ಇರುವುದಿಲ್ಲ ಎಂದರೆ ಸಾಕ್ಷಿ ಅಲ್ಲಿ ಇಲ್ಲಾ ಆದರೆ 2 ಕಿಮೀ ದೂರದಲ್ಲಿ ನಗರನಹಳ್ಳಿ ಇದ್ದು ಅದರ ಗ್ರಾಮ ಪಂಚಾಯ್ತಿಯಲ್ಲಿ ನಾನು ಲ್ಯಾಪ್‌ಟಾಪ್‌ನಲ್ಲಿ ಟೈಪ್ ಮಾಡಿದ ಮಹಜರ್ ಅನ್ನು ಪ್ರಿಂಟ್ ತೆಗೆಸಿರುತ್ತೇನೆ ಎಂದು ನುಡಿಯುತ್ತಾರೆ. ಈ ಎಲ್ಲಾ ವಿಷಯವನ್ನು ನಿಪಿ 2 ರಲ್ಲಿ ಹೇಳಿಲ್ಲ ಎಂದರೆ ಸರಿ. ಪಂಚರ ಸಹಿಯನ್ನು ಪಡೆಯುವುದಕ್ಕಿಂತ ಮೊದಲೇ ಪ್ರಿಂಟ್ ತೆಗೆಸಿದ್ದೆ, ಅದನ್ನು ಘಟನಾ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಓದಿ ಹೇಳಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಬೆಳಿಗ್ಗೆ 10.15 ಗಂಟೆಗೆ ಪಂಚರಿಗೆ ನೋಟಿಸ್ ಜಾರಿ ಮಾಡಿ ಅವರನ್ನು ಪಂಚರಾಗಿ ಬರುವಂತೆ ಕೇಳಿಕೊಂಡಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ, ಪಂಚರಿಗೆ ಯಾವುದೇ ನೋಟಿಸ್ ಜಾರಿ ಮಾಡಿಲ್ಲ, ಪಂಚರ ಸಮಕ್ಷಮ ಯಾವುದೇ ಮಹಜರ್ ಅನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಯಾವುದೇ ವಸ್ತುಗಳನ್ನು ನನ್ನ ಮುಂದೆ ಹಾಜರುಪಡಿಸಿಲ್ಲ ಮತ್ತು ಘಟನಾ ಸ್ಥಳ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಖಾತಾ ಎಕ್ಸ್‌ಟ್ರಾಕ್ಟ್ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ದೋಷಾರೋಪಣ ಪಟ್ಟಿ ಸಲ್ಲಿಸುವುದಕ್ಕಿಂತ ಮೊದಲು ನಾನು ಯಾವುದೇ ಮೇಲಾಧಿಕಾರಿಗಳ ಅನುಮತಿ ಪಡೆದಿಲ್ಲ. ಚಾಸಾ 1 ನನ್ನ ಮುಂದೆ ಯಾವುದೇ ದೂರನ್ನು ಸಲ್ಲಿಸದೇ ಇದ್ದರು ಸಹಾ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ, ಯಾವುದೇ ತನಿಖೆಯನ್ನು ಮಾಡದೇ

ನ್ಯಾಯಾಲಯಕ್ಕೆ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2 ಮತ್ತು 3ನೇ ಆರೋಪಿತರ ವಕೀಲರು ಹಾಜರಿದ್ದು, ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆಃ ಇಲ್ಲ

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು
ಹೊಳೆನರಸೀಪುರ.